Regd No B G 155

Sri

4—3—1965

ಸತ್ಯವಾದಿ

48th Year

Satyavadi

DAILY

MYSORE 4

ಸಂಸ್ಥಾಪಕರು — ಅರಮನೆ ಸಂಸ್ಥೇದಾರ್ ಎಂ ಎ ಸುಬ್ಬರಾಯರು ಸಂಪಾದಕರು — ಧರ್ಮಪ್ರಚಾರವಿಶಾರದ ಎಂ ಎಸ್ ಕೃಷ್ಣರಾವ್ ೭ ಪೈ.

ಇಂಗ್ಲೀಷು ಬೇಡ

ಅಲಹಾಬಾದ್— ಅಲಹಾಬಾದು ವಿಶ್ವವಿದ್ಯಾನಿಲಯದ ಫಿಜಿಕ್ಸ್ ಲೆಕ್ಚರರೊಬ್ಬರು ಪ್ರಶ್ನೆಪತ್ರಿಕೆ ಇಂಗ್ಲೀಷಿನಲ್ಲಿದ್ದುದರಿಂದ ವಿದ್ಯಾರ್ಥಿಗಳ ಪರೀಕ್ಷೆ ನಡೆಸಲು ತಿರಸ್ಕರಿಸಿದರು ; ಡಾ|| ಮುಂಶಿ ಮಸೌದ ಹುಸೇನ್ ಜೋಷಿ, ಜನಸಂಘದ ವಿಶ್ವವಿದ್ಯಾಲಯ ಕಾರ್ಯದರ್ಶಿ ; ಜನವರಿ 26 ರಿಂದ ಇಂಗ್ಲೀಷು ರಾಜ್ಯಭಾಷೆಯಲ್ಲವಾಗಿ ತಾವು ತಿರಸ್ಕರಿಸಿದುದಾಗಿ ಹೇಳಿದರು

★

5 ಶಕ್ತಿಗಳು

ಲಂಡನ್— ಶಸ್ತ್ರಾಸ್ತ್ರಗಳ ಜಾಡನ್ನು ಮುಕ್ತಾಯಗೊಳಿಸುವ ವಿಷಯದಲ್ಲಿ ಚೀನಾ ಸೇರಿ 5 ಶಕ್ತಿಗಳ ಸಮ್ಮೇಳನ ನಡೆಯುವ ವಿಚಾರವನ್ನು ತಾವು ಪರಿಶೀಲಿಸುತ್ತಿರುವುದಾಗಿ ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಹೇಳಿದರು.

❋

ಅಗಾಖಾನನಿಂದ

ಬಾಬೇ ತಂದ ಚಾಕಿ

ನವದೆಹಲಿ— ಈಗಿನ ಅಗಾಖಾನರ ತಾತನಾದ ಮೂರನೇ ಅಗಾಖಾನರಿಂದ ಬಂದೇಕಾಗಿದ್ದ ಅದಾಯ ತೆರಿಗೆ ಬಾಕಿ ರೂ 6575000 ಹೋಯಿತೆಂದು ಲೆಕ್ಕಿಸಲಾಗಿರುವುದಾಗಿ ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

❋

ಭಾಷಾ ವಿಷಯದಲ್ಲಿ

ಬೆಂಗಳೂರು— ಭಾಷಾ ವಿಷಯದಲ್ಲಿ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಆದ ತೀರ್ಮಾನದ ವಿಷಯವನ್ನು ಒಂದೆರಡು ದಿವಸಗಳಲ್ಲಿ ವಿಧಿಸುವುದಾಗಿ ನಿನ್ನೆ ಶಾಸನಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ತಿಳಿಸಿದರು

ಶಾಲೆಯ ಪಂಚಾಂಗ

ಆಪ್ತಸಮಾಹಾವಿರ್ವಾಣ ಧರ್ಮಾಧಿಕಾರಿ ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ವನ್ಮಣಿ ಸಂಪಕೃಷ್ಣಜೋಯಿಸರಿಂದ

೭ ತುಕ್ಕಾಣಿ ಬಿದಿಗೆ ಉತ್ಕರಾಭಾದ್ರ

ಚಿನ್ನಾಭರಣದ ಹುಚ್ಚು

ಮದಂಪಲ್ಲಿ— ಚಿನ್ನಾಭರಣದ ಹುಚ್ಚು ಪುರುಷರಿಗೆ ಹೆಚ್ಚಾಗಿದ್ದು ಅವರು ಕತ್ತಿನಲ್ಲಿ ಭಂಗಾರದ ಕಿರಿ ಸರ, ಕೈಗಡಿಯಾರಕ್ಕೆ ಚಿನ್ನದ ಪಟ್ಟಿ, ಕೆಲವರು ತೋಳುಗಳಲ್ಲೂ ಚಿನ್ನದಪಟ್ಟಿ ಧರಿಸುವುದಾಗಿದೆಯೆಂದು ಶಾಸನ ಸಭೆಯಲ್ಲಿ ಶ್ರೀಮತಿ ಲಕ್ಷ್ಮಿಕಾಂತಮ್ಮ ಹೇಳಿದರಾ ಪುರುಷರೆಲ್ಲ ನಕ್ಕರು.

★

ಪ್ರತಿಜ್ಞೆ

ಟೋಕಿಯೊ— ಪಾಕಿಸ್ತಾನದ ಅಧ್ಯಕ್ಷ ಅಯೂಬರೂ ಚೀನಾ ಅಧ್ಯಕ್ಷ ಲಿಯು ಷೋಚಿಯರೂ ತಮ್ಮ ಎರಡು ದೇಶಗಳ ನಡುವಿನ ಮೈತ್ರಿ ಬಗ್ಗೆ ಪ್ರತಿಜ್ಞೆ ನವೀಕರಿಸಿಕೊಂಡರು

❋

ವಿರುದ್ಧ ಟೀಕೆ

ಬೆಂಗಳೂರು— ಭೂ ಕಂದಾಯದಲ್ಲಿ ಮೂರೂವರೆ ಕೋಟಿ ರೂಗಳನ್ನು ಹೆಚ್ಚಾಗಿ ಪಡೆಯಲು ಭೂ ಕಂದಾಯದ ಪುನರ್ದರ್ಶನದ ಬಗ್ಗೆ ಶಾಸನ ಸಭೆಯಲ್ಲಿ ಶಂದಿರುವ ಮಸೂದೆಯನ್ನು ಕಟುವಾಗಿ ಟೀಕಿಸಲಾಯಿತು.

❋

ಒಳ್ಳೇ ನಷ್ಟ

ನವದೆಹಲಿ— ಹಿಂದೂಸ್ತಾನ್ ಏರೋನಾಟಿಕ್ಸ್ ಕಾರ್ಖಾನೆಯು 63-64 ರಲ್ಲಿ ಒಂದು ಕೋಟಿ ರೂಗಳಿಗಿಂತಲೂ ಹೆಚ್ಚು ಲಾಭವನ್ನು ಗಳಿಸಿರುವುದೆಂದು ಇತ್ತೀಚೆಗೆ ಬಿಡುಗಡೆಯಾದ ಸಂಸ್ಥೆಯ ವಾರ್ಷಿಕ ವರದಿಯಿಂದ ವ್ಯಕ್ತವಾಗಿದೆ.

❋

ಸಿದ್ಧವಾಗುತ್ತೆ

ಮದ್ರಾಸು— ಸೇಲಂ-ಬೆಂಗಳೂರು ರೈಲು ರಸ್ತೆ ನಿರ್ಮಾಣವು 1966 ನೇ ಡಿಸೆಂಬರೊಳಗೆ ಮುಗಿಯುವ ನಿರೀಕ್ಷೆ ಇದೆ ಎಂದು ತಿಳಿಸಲಾಗಿದೆ

ಭಾರತಕ್ಕೆ ಬೇಕಾದಷ್ಟು ಗೋಧಿ

ಸಮಾಚಾರ ಸಂಗ್ರಹ

ಲಂಡನ್— ಬ್ರಿಟೀಷು ಓವರ್‌ಸೀಸು ಏಂಜೆನ್ಸಿಯವರಿಂದ ಬಂದೇಕಾಗಿದ್ದ 30 ಮಿಲಿಯ ಪೌಂಡು ಖಾಲಪನ್ನು ಹೋಯಿತೆಂದು ಲೇಬರು ಸರ್ಕಾರ ಹೊಡೆದು ಹಾಕಿದೆ.

═══

ನವದೆಹಲಿ— ನೆಹರೂರವರ ನುಡಿಗಳನ್ನು ಕಲ್ಲಿನಲ್ಲಿ ಕೆತ್ತಿಸಿ ಅನೇಕ ಕಡೆ ಇಡುವ ಯೋಚನೆಯಿದೆಯೆಂದೂ ಅದೈಕೆ ಶಾಂತಿವನದಲ್ಲೂ ಒಂದೆಂದೂ ಪಾರ್ಲಿಮೆಂಟಿನಲ್ಲಿ ತಿಳಿಸಲಾಯಿತು.

———

ನವದೆಹಲಿ— ಕಲ್ಕತ್ತಾದಲ್ಲಿ ರಷ್ಯಾದ ಚಿನ್ನದ ಮಾರಾಟಕ್ಕಿಟ್ಟಿಲ್ಲವೆಂದೂ, ಅದರೆ ಭಂಗಾರದ ಖರೀದಿಗೆ ಅಜ್ಜಿ ಉಲ್ಲಂಘನೆ ನಡೆಯುತ್ತಿರುವುದೆಂದೂ ಪಾರ್ಲಿಮೆಂಟಿನಲ್ಲಿ ತಿಳಿಸಲಾಯಿತು.

❋

ಬೆಂಗಳೂರು— ಪೋಲೀಸರು ಸಂಶಯಾಸ್ಪದವಾಗಿ ತಿರುಗುತ್ತಿದ್ದ ಒಬ್ಬನನ್ನು ತೋಧಿಸಿ ಅವನಲ್ಲಿದ್ದ ರೂ 1000 ಬೆಲೆಯ 81 ಗ್ರಾಂ ಸ್ವರ್ಣ ಚಿನ್ನವನ್ನು ವಶಪಡಿಸಿಕೊಂಡರು.

★

ನವದೆಹಲಿ— ಸ್ವಿಗರೇಟ್ ಕೊಲೆ ಸಂಬಂಧದ ವಿಚಾರವು ಕೆಲವರಿಗೆ ವೆಯದಲೇ ತಿಳಿದಿತ್ತೆಂಬ ವಿಷಯ ಶೋಧನೆಗೆ ಒಂದು ಕಮಿಷನ್ನು ನೇಮಿಸುವ ಬಗ್ಗೆ ಏರ್ಪಾಡು ನಡೆಯುತ್ತಿದೆಯೆಂದು ಲೋಕ ಸಭೆಯಲ್ಲಿ ತಿಳಿಸಲಾಯಿತು.

ಬಚ್ಚಿಟ್ಟ ಹಣ

ನವದೆಹಲಿ— ಬಚ್ಚಿಟ್ಟ ಹಣದ ಶೋಧನೆಗಾಗಿ ಆದಾಯ ತೆರಿಗೆ ಶಾಸನದ ಕಲಂ ಪ್ರಕಾರ ನಿನ್ನೆ ಲೋಕಸಭೆಯಲ್ಲಿ ಶಾಸ್ತ್ರಸುಹುರಿದಿಂದ ಅನುಮೋದಿಸಲಾಯಿತು : ಇಲ್ಲಿಯವರೆಗೆ 1000 ನಿವಾಸಗಳಲ್ಲಿ ಮತ್ತು ಬ್ಯಾಂಕು ಲಾಕರುಗಳಲ್ಲಿ 500 ಶೋಧನೆಗಳನ್ನು ನಡೆಸಲಾಗಿತ್ತು ಎಂದು ತಿಳಿಸಲಾಯಿತು : 5 ಕೋಟಿ ರೂಗಳ ಹಣ ಒಡವೆ ಮತ್ತು 50 ಕೋಟಿ ರೂಗಳ ಬೋಗಸ್ ಹುಂಡಿಗಳೂ ಸಿಕ್ಕಿವೆಯೆಂದೂ ತಿಳಿಸಲಾಯಿತು.

ದೇವಸೆಂಗ್

ಬೆಂಗಳೂರು— ವಿಧ್ಯುಕ್ತವಲ್ಲದ ದೇವಸನಂಗಳನ್ನು ದೊಡ್ಡ ಪಟ್ಟಣಗಳಲ್ಲಿ ಜಾರಿಗೆ ತರಲು ಯೋಚಿಸಲಾಗುತ್ತಿದೆಯೆಂದು ಶಾಸನ ಸಭೆಯಲ್ಲಿ ತಿಳಿಸಲಾಗಿತ್ತು.

ಅತಿ ದೊಡ್ಡ ಫೋಲು

[ಮುಂದುವರಿದುದು]

ರಾಜ್ಯದ ವಿವಿಧ ಭಾಗಗಳಿಂದ ಅಧಿವೇಶನ ಸ್ಥಳಕ್ಕೆ ಪಶ್ಚಿಮ ಬಂಗಾಳಾ ಪೋಲೀಸು ಅಧಿಕಾರಿಗಳು ಮತ್ತು ವ್ಯಾಪಿಗಳ 5000 ಮಂದಿ ಕಳುಹಿಸಲ್ಪಟ್ಟಿದ್ದು ಅವರು ಅಲ್ಲಿ ಆರು ದಿನಗಳಾದರೂ ಇದ್ದರು : ೨ ಕಾಲದಲ್ಲಿ ಇತರ ಹಿರಿಯ ಪೊಲೀಸು ಉನ್ನತಾಧಿಕಾರಿಗಳು ಅಧಿವೇಶನ ಸಂಬಂಧದ ಕಾರ್ಯಗಳಲ್ಲಿ ಮಗ್ನರಾಗಿದ್ದರು ; ಒಂದು ವಾರಕ್ಕೆ ಅಲ್ಲಿಗೆ ನೇಮಿಸಿಕೊಂಡಿದ್ದ ಭಾರಿ ವಾಹನಗಳ ಗುಂಪು ಮತ್ತಿತರ ಅವಶ್ಯಕ ಸಾಮಾನು ಸರಂಜಾಮು ಕಡೇಪಕ್ಷ 2 ಲಕ್ಷ ರೂಗಳಾಗುತ್ತೆ

ಆಯಾ ತಿರೋನಾಮೆಗಳಲ್ಲಿನ ಅಂಕಿಅಂಶಗಳ ಖರ್ಚಿಗಳು ಹೀಗಿದ್ದರೂ ಅದು ಇನ್ನೂ ಪೂರ್ಣಗೊಂಡಿಲ್ಲ – 69 ನೇ ಕಾಂಗ್ರೆಸ್ಸು ಅಧಿವೇಶನಕ್ಕೆ ಒಟ್ಟು 1-01 ಕೋಟಿ ರೂಗಳಾಗುವುದು.

ಖರ್ಚು ಮಾಡಿದ ಹಣಕ್ಕೆ ಪ್ರತಿಫಲವಾಗಿ ಕಾರ್ಯಗಳು ಏನು ಪಡೆಯಲು ವರು ಮತ್ತು ವಸ್ತುಪ್ರದರ್ಶನ ಸ್ವಾಲಿನವರು ತಾವು ಅಲ್ಲಿಗೆ ಉಪಯೋಗಿಸಿ ಕೊಂಡಿದ್ದ ಹಣದಲ್ಲಿ ಎಷ್ಟು ಹೋಗುವುದೆಂಬುವುದು ಏನೂ ತಿಳಿದಿಲ್ಲ ; ಮುಂದೆ ಗೊತ್ತಾಗಬೇಕು.

ರೈಲ್ವೇ ಸರ್ವಿಸ್ಸಿನ ಬಹುತಾವನೆ ಕಾರ್ಯಕ್ರಮವು ಇದನ್ನು ಸೂಚಿಸಿತ್ತಾಗಿಬೆ ; ಕಳೆದುಬಿದ್ದಿನ ಖರ್ಚಿನಿಂದ ಈ ಅಧಿವೇಶನಕ್ಕಾಗಿಯೇ ಕಟ್ಟಲ್ಪಟ್ಟ ಹೊಸ ರೈಲ್ವೇ ಸ್ಟೇಷನ್ನಿನಲ್ಲಿ ಸುಮಾರು 36000 ರೂಗಳ ಟಿಕೇಟುಗಳು ಮಾರಲ್ಪಟ್ಟವು : ಇಲ್ಲಿಗೆ ಓಡಾಡುವ ವಿಶೇಷ ರೈಲುಗಳ ಬಗ್ಗೆ ಪ್ರಚಾರಕ್ಕಾಗಿ 12000 ರೂಗಳು ಖರ್ಚು ಮಾಡಲ್ಪಟ್ಟವು ; ಪ್ರಯಾಣೇಕರಿಲ್ಲದೆ ಕೆಲವು ವಿಶೇಷ ರೈಲುಗಳು ರದ್ದು ಪಡಿಸಲ್ಪಟ್ಟವು : ಮತ್ತಿತರ ರೈಲುಗಳು ನಿರೀಕ್ಷಿಸಿದ್ದಕ್ಕಿಂತ ಕಡಮೆ ಜನರನ್ನು ಹೊಗೊಂಡಿದ್ದವು.

(Truth ನಿಂದ)

Lakshminarasimha Press

Quality Printing ⟷ Neat Binding

Sivarampet, Mysoae

ಆಶೋಕಾ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ನಮ್ಮಲ್ಲಿ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.

ಎಲ್ಲ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

ಗೋಂಕ್ಷಣೆ ಪ್ರತಿಜ್ಞೆದಯೂ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ.

Help The 'Gorakshana'

" ಗೋರಕ್ಷಣಾ " ಕ್ಕೆ ಬೆಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಮಹಾರಾಜ್‌ರವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನದವರ ಉದಾರ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ನೈಸೆ ; " ಗೋರಕ್ಷಣ " ಕ್ಕೆ ಲೇಖನಗಳನ್ನು ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ– ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು ೪

ವುಡ್‌ಲ್ಯಾಂಡ್ 26-2-65 ರಿಂದ

ಅಮೋಘ ಆರಂಭ

— ಅತ್ಯಪೂರ್ವ ಹಿಂತ ಚಿತ್ರ —

ಫೂಲೋಂ ಕಿ ಸೇಜ್

ನಟನಗರ— ವೈಜಯಂತಿಮಾಲಾ, ಅಶೋಕ್‌ಕುಮಾರ್, ನಿರೂಪರಾಯ್

ಮನೋಜಕುಮಾರ್, ಮಹಮೂದ್

[ದಿನವಹಿ 3 ಪ್ರದರ್ಶನಗಳು]

ಆಪೆರಾ 5-3-65 ರಿಂದ

ನಾಗ ಪೂಜಾ (ಕನ್ನಡ)

ತಾರಾಗಣ— ರಾಜಕುಮಾರ್, ಲೀಲಾವತಿ, ರಾಜಶ್ರೀ, ರಾಘವೇಂದ್ರರಾವ್

ಅಮೋಘ ಪೌರಾಣಿಕ ಕನ್ನಡ ಚಿತ್ರ — ದಿನ 3 ಆಟಗಳು

ರಣಜಿತ್‌ನಲ್ಲಿ ಯಶಸ್ವಿ 4 ನೇ ವಾರ

ನೋಡಿದವರೆಲ್ಲಾ ಪ್ರಶಂಸಿಸುತ್ತಿರುವ ಈ ಚಿತ್ರವನ್ನು ನೀವು ಇನ್ನೂ ನೋಡದಿದ್ದರೆ ಇಂದೇ ನೋಡಿ

ಕರ್ನಾಟಕ ಫಿಲಂಸ್ ಅರ್ಪಿಸುವ ವಿವಿಧ ಭಾರತಿಯವರ –

ಬೆರತ ಜೀವ [ಕನ್ನಡ]

ತಾರಾಗಣ— ಕಲ್ಯಾಣ ಕುಮಾರ್, ಅಶ್ವಥ್, ರಾಮಮೂರ್ತಿ ಶಾಸ್ತ್ರಿ, ನರಸಿಂಹರಾಜು, ತಿಪಟೂರ್, ಸರೋಜಾದೇವಿ, ಲಕ್ಷ್ಮೀದೇವಿ, ಜಯಶ್ರೀ

ನಿರ್ಮಾಪಕರು— ಟಿ. ರಾ. ಸೀತಾರಾಮು ಶಾಸ್ತ್ರಿ

4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಹೊರತಾಗಿಸಲಾಗಿದೆ.

ಪ್ರತಿ ದಿನ 3 ಪ್ರದರ್ಶನಗಳು — ಕರ್ನಾಟಕ ಫಿಲಂಸ್ ಹಂಚಿಕೆ

SHAKTI

SUDHA

Superb Tonic

Edited, Printed & Published by the Proprietor

Dharma Prachara Nirata M. S. Krishna Rao

at the Satyavadi Press, Chamarajapuram, Mysore 4